ಶ್ರೀ ಕೆ. ಎ. ಶಂಕರ ಗೌಡ —ಅವು ಸ್ವಯಂ ಆಡಳಿತ ಸಂಸ್ಥೆಗಳು. ಆದ್ದರಿಂದ ಅವುಗಳಿಗೆ ಆದೇಶ ನೀಡುವುದಕ್ಕೆ ಬರುವುದಿಲ್ಲ. ಎರಡೂ ವಿಶ್ವವಿದ್ಯಾನಿಲಯಗಳೂ ಬೆಂಗಳೂರು ವಿಶ್ವವಿದ್ಯಾನಿಲಯದ ರೀತಿ ಇರಬೇಕು ಎಂದು ಕಡ್ಡಾಯವಿಲ್ಲ. ಯಾವಾವ ವಿಶ್ವವಿದ್ಯಾನಿಲಯದ ಪರಿಸ್ಥಿತಿ ಗನುಗುಣವಾಗಿ ಅವರು ಮೊಬಲಗನ್ನು ನಿರ್ಧಾರ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಕೆಲವು ಖಾಸಗೀ ವಿದ್ಯಾಸಂಸ್ಥೆಗಳು ಸರ್ಕಾರದಿಂದ ಸಹಾಯ ಧನವನ್ನು ತೆಗೆದುಕೊಂಡು ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೂ ಸ್ಥಳ ಇಲ್ಲದೆ ವ್ಯಾಪಾರಿ ಸಂಸ್ಥೆಗಳಾಗಿವೆ. ತಾವು ಅವನ್ನು ರದ್ದು ಮಾಡಿ ರಾಷ್ಟ್ರೀಕರಣ ಮಾಡಿ ಅವುಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Mr. SPEAKER.—How does it arise? The question relates to deposit to be made by private institutions for opening new colleges.

Sri M. A. AMALORPAVAM.—Has the Government any proposal to start colleges in the near future in Civil Station, Bangalore?

Mr. SPEAKER.—That does not arise.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ರತಿವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಾ ಇದ್ದು ಉತ್ತರ ಕರ್ನಾಟಕದಲ್ಲಿ ಕಾಲೇಜುಗಳನ್ನು ತೆರೆಯುವುದು ಬಹಳ ಅವಶ್ಯ ಇರುವುದರಿಂದ ಡಿಪಾಸಿಟ್ ಹೆಚ್ಚಾಗಿರುವುದರಿಂದ ಅದನ್ನು ಕಡಿಮೆ ಮಾಡುವುದಕ್ಕೆ ಕರ್ನಾಟಕ ಯೂನಿವರ್ಸಿಟಿಗೆ ತಿಳಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ಮೊದಲೇ ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಇಂಜನೀಯರಿಂಗ್ ಕಾಲೇಜುಗಳಿಗೆ ಮತ್ತು ಮೆಡಿಕಲ್ ಕಾಲೇಜುಗಳಿಗೆ ಹೆಚ್ಚಾಗಿ ವಿದ್ಯಾರ್ಥಿಗಳು ಬರುತ್ತಾ ಇರುವುದರಿಂದ ಖಾಸಗಿ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕಾದರೆ 10 ಲಕ್ಷ ರೂಪಾಯಿ ಡಿಪಾಜಿಟ್ ಗಳನ್ನು ಇಡಬೇಕಾಗುತ್ತದೆ. ಇದು ಜಾಸ್ತಿ ಆಗುತ್ತಾ ಇರುವುದರಿಂದ ಮತ್ತು ಹುಡುಗರಿಗೆ ತೊಂದರೆಯನ್ನು ತಪ್ಪಿಸುವ ದೃಷ್ಟಿಯಿಂದ ಸರ್ಕಾರದವತೇ ಸೆಕ್ಯೂರಿಟಿ ಹಣ ಕೊಟ್ಟು ಈ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ಮುಂದೆ ಯಾವ ಇಂಜನಿಯರಿಂಗ್ ಕಾಲೇಜು ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಈಗಲೇ ಇಂಜಿನಿಯರಿಂಗ್ ಕಾಲೇಜು ಬಹಳ ಇವೆ. ಆದ್ದರಿಂದ ಮುಂದೆ ಇಂಜನಿಯರಿಂಗ್ ಕಾಲೇಜು ಸ್ಥಾಪನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಬೇರೆ ಬೇರೆ ಯೂನಿವರ್ಸಿಟಿಗಳು ಅಲ್ಲಯ ಪರಿಸ್ಥಿತಿಗೆ ಅನುಸರಿಸಿ ಶೇವಣಿ ಗೊತ್ತು ಮಾಡಿದ್ದಾರೆ. ಎಂದು ಹೇಳಿದ್ದೀರಿ. ಬೇರೆ ಬೇರೆ ಯೂನಿವರ್ಸಿಟಿ ಗಳಲ್ಲಿರುವ ವ್ಯತ್ಯಾಸ ಏನು ? ಏಕರೂಪತೆಯ ಶೇವಣಿಯನ್ನು ಎರಡೂ ವಿಶ್ವವಿದ್ಯಾನಿಲಯಗಳಲ್ಲೂ ಇಡುವುದಕ್ಕೆ ಸರ್ಕಾರ ವರ್ಚಸ್ಸನ್ನು ಉಪಯೋಗ ಮಾಡುವುದಕ್ಕೆ ಅವಕಾಶ ಇಲ್ಲವೇ ?

ಶ್ರೀ ಕೆ. ಎ. ಶಂಕರ ಗೌಡ.—ಸ್ವಯಂ ಆಡಳಿತ ಅಧಿಕಾರ ಕೊಟ್ಟಮೇಲೆ ಪದೇ ಪದೇ ಅವರ ಕಾರ್ಯಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವುದು ಕಷ್ಟವಾಗುತ್ತದೆ.

Mr. SPEAKER.—Question Hour is over. Now Sri S. R. Bommai has tabled short notice Question No. 65 but he is not here. On his behalf Sri F. S. Patil is permitted to put the question.

SHORT NOTICE QUESTION AND ANSWER

Pooling of Seats in B.Sc. (Agri.) course

Q.—65. Sri S. R. BOMMAI (Kundagol).—

Will the Chief Minister be pleased to state :—

(*a*) whether Government is aware that the method of common pooling of seats for I year in B.Sc. (Agri.) Course of Agricultural University has resulted in denying number of students of Karnatak University in the year 1966-67 from getting admissions ;

(*b*) whether there is any proposal before the Government to take suitable action to allot seats in I year Agricultural on the same basis as allotment of seats for I year Medical and Engineering students in the State to avoid this dscrimination ?

A.—Sri D. B. PAWAR (Deputy Minister for Agriculture) [On behalf of SRI S. NIJALINGAPPA (Chief Minister)].—

(*a*) No.

(*b*) No.

2-00 P.M.

ಶ್ರೀ ಎಫ್. ಎಸ್. ಪಾಟೀಲ್.—ಹೋದಸಾರಿ ಅಗ್ರಿಕಲ್ಚರು ಕಾಲೇಜಿಗೆ ಎಷ್ಟು ಜನ ಅರ್ಜಿ ಹಾಕಿದ್ದರು ಮತ್ತು ಅವರಲ್ಲಿ ಎಷ್ಟು ಜನರನ್ನು ಇಂಟರ್‌ವ್ಯೂಗಾಗಿ ಕರೆಯಿದ್ದರು ?

Sri D. B. PAWAR.—From the Karnatak University last year there were 85 candidates were selected subsequently 27 actually joined, out of which again only 7 remained.

ಶ್ರೀ ಶಿದ್ದಯ್ಯ ಕಾಶೀಮಠ್.—ಆಗಿಂದಾಗ್ಗೆ ಪ್ರಶ್ನೆ ಪತ್ರಿಕೆಗಳನ್ನು ಇಲ್ಲಿ ಬದಲಾಯಿಸುತ್ತಾ ಇರುವುದರಿಂದ ಆಗಿರುವ ಪರೀಕ್ಷಾ ಮಂಡಲಿಯವರನ್ನು ಬದಲಾಯಿಸಲು ಸರ್ಕಾರ ಯೋಚಿಸಿದ್ದಾರೆಯೇ ?

Mr. SPEAKER.—How does it arise ?

ಶ್ರೀ ಕೆ. ಹೆಚ್. ಪಾಟೀಲ್.—ಕರ್ನಾಟಕ ಯೂನಿವರ್ಸಿಟಿ ಹಾಗೂ ಮೈಸೂರು ಯೂನಿವರ್ಸಿಟಿಗಳ ಪರೀಕ್ಷೆಗಳು ಬೇರೆ ಬೇರೆಯಾಗಿರುವುದರಿಂದ ಇಲ್ಲಿ ದೊರೆಯುವ ಗುಣ ಅಲ್ಲಿ ದೊರೆಯುವ ಗುಣ ಇಲ್ಲಿ ದೊರಕುವುದಕ್ಕಿಂತ ಬೇರೆ ರೀತಿಯಾಗಿರುವುದರ ಪರಿಣಾಮವಾಗಿ ಕರ್ನಾಟಕ ಯೂನಿವರ್ಸಿಟಿಯ ವಿದ್ಯಾರ್ಥಿಗಳಿಗೆ ಸಾಕಷ್ಟು ಸೀಟುಗಳು ಸಿಗಲಿಕ್ಕೆ ಆಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri D. B. PAWAR.—It is not so, Sir.

ಶ್ರೀ ಶಿದ್ದಯ್ಯ ಕಾಶೀಮಠ್.—ಕರ್ನಾಟಕ ಯೂನಿವರ್ಸಿಟಿಯು ಅಯ್ಕೆ ಪದ್ಧತಿಯಲ್ಲಿ ಅನ್ಯಾಯಗಳಾಗುತ್ತಿವೆ. ಮತ್ತು ಅಲ್ಲಿ ದೊರೆಯುವ ಅಂಕಗಳೂ ಅದಕ್ಕನುಗುಣವಾಗಿರುತ್ತವೆ ಎಂದಿರುವುದರಿಂದ ಇಲ್ಲಿ ಮಾಡುವ ಆಯ್ಕೆ ಹಂಚಿಕೆಯನ್ನು ಬೇರೆ ರೀತಿಯಿಂದ ಮಾಡುತ್ತೀರಾ ?

Sri D. B. PAWAR.—I do not think it is possible, Sir.

ಶ್ರೀ ಎಫ್. ಎಸ್. ಪಾಟೀಲ್.—ಎಲ್ಲ ಯೂನಿವರ್ಸಿಟಿಗಳಲ್ಲಿಯೂ ಸಿಲಬಸ್‌ನ್ನು ಒಂದೇ ರೀತಿಯಾಗಿ ಮಾಡಲು ಸರಕಾರ ಏನಾದರೂ ಆಲೋಚನೆ ಮಾಡಿದೆಯೇ ?

Sri D. B. PAWAR.—Syllabuses in the Universities are different.

ಶ್ರೀ ಎಸ್. ಗೋಪಾಲಗೌಡ.—ರಾಜ್ಯದಲ್ಲಿರತಕ್ಕ ಮೂರು ವಿಶ್ವವಿದ್ಯಾನಿಲಯಗಳಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಕುಳಿತು ಸೀಟುಗಳನ್ನು ಆಯ್ಕೆ ಮಾಡುತ್ತಾರೆ. ಇದರಲ್ಲಿ ಸಿಲಬಸ್ ಮಾಡುವುದರಲ್ಲಿಯೂ ಕೂಡ ವ್ಯತ್ಯಾಸಗಳಿವೆ ಮತ್ತು ಮಾನ್ಯ ಸದಸ್ಯರಾದ ಶ್ರೀಮಾನ್ ಪಾಟೀರ್ ರವರು ಹೇಳಿದಹಾಗೆ ವಿದ್ಯಾರ್ಥಿಗಳಿಗೆ ಅಂಕಗಳನ್ನು ಕೊಡುವಾಗಲೂ ವ್ಯತ್ಯಾಸಗಳಿವೆ. ಹೀಗಿರುವಾಗ ಕೆಲವು ತರಗತಿಗಳಿಗೆ ನೀವು ಆಯ್ಕೆಗಳನ್ನು ಮಾಡುವಾಗ ಒಟ್ಟು ಸೇರಿಸಿ ಪೂರ್ ಮಾಡಿ ಆಯ್ಕೆ ಮಾಡಬೇಕೆಂದು ಈಚೆಗೆ ಆ ರೀತಿಯಾಗಿ ಆಯ್ಕೆಯನ್ನು ಮಾಡಿದ್ದಾರೆ. ಆದರಂತೆ ಪೂಲ್ ಮಾಡುವಾಗ ಒಂಬೊಂದು ಯೂನಿವರ್ಸಿಟಿಯನ್ನೂ ಕಂಪೇರ್ ಮಾಡಿ ನೋಡಿದರೆ ಸೀಟುಗಳ ಸಂಖ್ಯೆ ಜಾಸ್ತಿ ಇದ್ದರೂ ಸೀಟುಗಳನ್ನು ಹಂಚುವಾಗ ಒಂದೇ ಸಮನಾಗಿ ಹಂಚುವುದಕ್ಕಾಗುತ್ತಿಲ್ಲ ಎನ್ನುವುದು ಈಚೆಗೆ ಬಂದ ಅನುಭವದ ಪ್ರಕಾರ ಕಾಣುತ್ತಿದೆ. ಇದರ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಇಲ್ಲಿರುವಾಗ ಒಂದು ಸಮಂಜಸವಾದ ಉತ್ತರ ಕೊಡಬೇಕೆಂದು ಕೇಳುತ್ತೇನೆ. ಪೂಲ್ ಮಾಡುವಾಗ ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೆ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿರುವುದರಿಂದ ಒಂದೇ ರೀತಿಯಾಗಿ ಸೀಟುಗಳನ್ನು ಆಯ್ಕೆ ಮಾಡುವುದು ಒಳ್ಳೆಯದಲ್ಲವೇ ?

Sri D. B. PAWAR.—The various Universities, the Karnatak University, the Bangalore University and Mysore University,—they are governed by separate Acts. While the University of Agricultural sciences is governed by a different Act. The suggestion made by the Hon'ble Member that seats should he pooled areawise is not feasible Sir.

ಶ್ರೀ ಆರ್. ಎಂ. ಹೆಗಡೆ.—ಮೈಸೂರು ವಿಶ್ವವಿದ್ಯಾನಿಲಯಕ್ಕಿಂತ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸ್ಟ್ಯಾಂಡರ್ಡ್ ಹೆಚ್ಚಾಗಿ ಇರುವುದರಿಂದ, ಸೀಟ್‌ಗಳನ್ನು ಕೊಡುವ ಬಗ್ಗೆ ಕಾಮನ್‌ಪೂಲಿಂಗ್ ಮಾಡುವುದರಿಂದ, ಕರ್ನಾಟಕ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕಡಿಮೆ ಗುಣಗಳು ಬಂದಿರುವುದರಿಂದ, ಇವರಿಗೆ ಸೀಟ್ ಸಿಗುವುದರಲ್ಲಿ ಅನ್ಯಾಯವಾಗುತ್ತದೆಂದು ತಮಗೆ ಕಂಡುಬರಲಿಲ್ಲವೆ ?

Sri D. B. PAWAR.—I realise that there is disparity between the two Universities. I think it is better that the aggrieved people represent this to the Universities.

CALLING ATTENTION NOTICES TO MATTERS OF URGENT PUBLIC IMPORTANCE

(I) *Re*: POSTPONEMENT OF APPOINTMENT OF VETERINARY ASSISTANT SURGEONS.

Mr. SPEAKER.—There is a Call Attention from yesterday's List of Business. It may be answered.

Sri M. MALLAPPA (Birur).—Sir, I call the attention of the Minister for Animal Husbandry, Fisheries and Publicity and Information to the postponement of appointment of Veterinary Assistant Surgeons.

Sri D. DEVARAJ URS (Minister for Animal Husbandry, Fisheries and Publicity and Information).—Sir, hon'ble Member's Call Attention Notice relates to the non-recruitment of Veterinary Graduates, as local candidates.